ದಿನಾಂಕಃ 01.09.2025 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ ಎನ್ ವಕೀಲರಿಂದಃ**

ದಾವೆಯಲ್ಲಿ ಏನು ಪರಿಹಾರ ಕೋರಿರುತ್ತೀರಾ ಎಂದರೆ ಪಿತ್ರಾರ್ಜಿತ ಸ್ವತ್ತಿನಲ್ಲಿ ನಮಗೂ ಭಾಗ ಬೇಕು ಎಂದು. ದಾವಾ ಸ್ವತ್ತು ಮೂಲತಃ ಯಾರ ಹೆಸರಿನಲ್ಲಿತ್ತು ಎಂದರೆ ನನ್ನ ತಂದೆ ಅಬ್ದುಲ್ ಸತ್ತಾರ್. ನನ್ನ ತಂದೆಗೆ ಮೂರು ಗಂಡು ಮಕ್ಕಳು, ಮೂರು ಹೆಣ್ಣು ಮಕ್ಕಳು ಇರುತ್ತಾರೆ. ದಾವಾ ಸ್ವತ್ತಿನ ಖಾತೆ ನನ್ನ ತಂದೆಯ ಹೆಸನರಿಲ್ಲಿಯೇ ಇದೆಯೇ ಎಂದರೆ ಅಲ್ತಾಫ್ ಹುಸೇನ್ ರವರಿಗೆ ನೋಂದಣಿ ಮಾಡಿಕೊಟ್ಟಿರುತ್ತೇವೆ. ಸದರಿ ಕ್ರಯಪತ್ರಕ್ಕೆ ಯಾರ್ಯಾರು ಕ್ರಯದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ನನ್ನ ತಂದೆ, ನಾನು ಮತ್ತು ನನ್ನ ತಮ್ಮಂದಿರು. ಸದರಿ ಕ್ರಯಪತ್ರಕ್ಕೆ ಹೆಣ್ಣು ಮಕ್ಕಳೂ ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯದ ಮೊಬಲಗು ಎಷ್ಟು ಎಂದರೆ 5,500-00. ಸದರಿ ಹಣವನ್ನು ಪಡೆದುಕೊಂಡು ಕ್ರಯದಿನಾಂಕ ಸ್ವಾಧೀನವನ್ನು 6ನೇ ಪ್ರತಿವಾದಿಗೆ ಬಿಟ್ಟಿಕೊಟ್ಟಿರುತ್ತೇವೆ ಎಂದರೆ ಸರಿ. ದಾವೆ ಸಲ್ಲಿಸಲು ಮಾಹಿತಿ ಯಾರು ಕೊಟ್ಟಿರುತ್ತಾರೆ ಎಂದರೆ ನಾನೇ ಕೊಟ್ಟಿರುತ್ತೇನೆ. ಕ್ರಯರೂಪದ ಆಧಾರಪತ್ರವನ್ನು ಮಾಡಿಕೊಟ್ಟಿದ್ದೇನೆ ಎಂದು ತಿಳಿಸಿರುತ್ತೀರಾ ಎಂದರೆ ದುಡ್ಡುಕೊಟ್ಟ ನಂತರ ಪುನಃ ಬರೆದುಕೊಡುವುದಾಗಿ



ಒಪ್ಪಿಕೊಂಡಿರುತ್ತೇವೆ. ಸದರಿ ನಿಪಿ-2 ಕ್ರಯಪತ್ರದಲ್ಲಿ ಎಷ್ಟು ದಿವಸದ ಒಳಗೆ ಹಣ ಮರುಪಾವತಿ ಮಾಡಬೇಕೆಂದು ನಮೂದಿಸಿರುತ್ತೀರಾ ಎಂದರೆ ಸದರಿ ಅವಧಿಯನ್ನು ನಮೂದಿಸಿರುವುದಿಲ್ಲ. 6ನೇ ಪ್ರತಿವಾದಿಗೆ ಪುನಃ ನೋಂದಣಿ ಮಾಡಿಕೊಡುವುದಾಗಿ ನೋಟೀಸ್ ನ್ನು ನೀಡಿರುತ್ತೀರಾ ಎಂದರೆ ಇಲ್ಲ ಆದರೆ ಹಣ ನೀಡಿರುತ್ತೇನೆ. ಯಾವ ದಿನಾಂಕ ಹಣ ಮರುಪಾವತಿ ಮಾಡಿರುತ್ತೀರಾ ಎಂದರೆ ಕ್ರಯಪತ್ರ ಆದ 10 ವರ್ಷದ ನಂತರ. ಹಣ ನೀಡಿದ ನಂತರ ಅದಕ್ಕೆ ಸಂಬಂಧಿಸಿದ ದಾಖಲಾತಿ ಏನಾದರು ಪಡೆದುಕೊಂಡಿದ್ದೀರಾ ಎಂದರೆ ಇಲ್ಲ. ಹಣಮರುಪಾವತಿ ಮಾಡಿದ ನಂತರ 6ನೇ ಪ್ರತಿವಾದಿಗೆ ನೋಟೀಸ್ ನೀಡಿದ್ದೀರಾ ಎಂದರೆ ಇಲ್ಲ ಆದರೆ ಕೇಳಿಕೊಂಡಿರುತ್ತೇನೆ. ಹಣ ಪಾವತಿ ಮಾಡಿರುತ್ತೇನೆ ನೋಂದಣಿ ಮಾಡಿಕೊಡು ಎಂದು 6ನೇ ಪ್ರತಿವಾದಿಯನ್ನು ನಾನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಹಣವನ್ನು ಯಾರ ಸಮಕ್ಷಮ

ನೀಡಿರುತ್ತೀರಾ ಎಂದರೆ ನಾನು ನನ್ನ ತಮ್ಮ, ತಂಗಿಯರು ನೀಡಿರುತ್ತೇವೆ. ನಿಪಿ-2 ನ್ನು ಮಾಡಿಕೊಟ್ಟ ನಂತರ ಅದಕ್ಕೆ ಸಂಬಂಧಿಸಿದಂತೆ ನಾನು 6ನೇ ಪ್ರತಿವಾದಿಯನ್ನು ಭೇಟಿಯಾಗಿ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. 6ನೇ ಪ್ರತಿವಾದಿ ದಾವಾ ಸ್ವತ್ತಿನ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಇಲ್ಲ ಮಸೀದಿ ಹೆಸರಿನಲ್ಲಿತ್ತು. 6ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡ ನಂತರ ದಾವಾ ಸ್ವತ್ತನ್ನು 1 ನೇ ಪ್ರತಿವಾದಿಗೆ

-8-

ನಿಪಿ-4 ರಂತೆ ರೂ. 6,25,000-00 ಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನವನ್ನು ನಿಪಿ-4 ರ ಆಧಾರದ ಮೇಲೆ 6ನೇ ಪ್ರತಿವಾದಿ 1ನೇ ಪ್ರತಿವಾದಿಗೆ ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಖಾತೆಯನ್ನು 1 ನೇ ಪ್ರತಿವಾದಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿ ಪಂಚಾಯತಿಯಿಂದ ಪರವಾನಗಿ ಪಡೆದುಕೊಂಡು ಹಳೆ ಮನೆಯನ್ನು ಬೀಳಿಸಿ ಹೊಸ ಕಟ್ಟಡವನ್ನು ಕಟ್ಟಿರುತ್ತಾರೆ ಎಂದರೆ ಸರಿ. ನಿಪಿ-2 ಮತ್ತು 4 ಕ್ರಯಪತ್ರಗಳನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಆದ ಕಾರಣ ನಿಪಿ-2 ಆದ ದಿನಾಂಕದಂದು ದಾವಾ ಸ್ವತ್ತಿನ ಮೇಲೆ ನಮ್ಮ ಹಕ್ಕನ್ನು ಕಳೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ 1ನೇ ಪ್ರತಿವಾದಿಗೆ ಹಕ್ಕು ಸ್ವಾಧೀನ ಇರುತ್ತದೆ ಎಂದರೆ ಸರಿಯಲ್ಲ ನಮ್ಮೆಲ್ಲರಿಗೂ ಇರುತ್ತದೆ. ನಿಪಿ-2ರಲ್ಲಿರುವ ನಿಬಂಧನೆಗಳನ್ನು ಕಾಲಾವಧಿಯ ಒಳಗಡೆ ಪಾಲಿಸದ ಕಾರಣ ದಾವಾ ಸ್ವತ್ತಿನ ಮೇಲೆ ಹಕ್ಕನ್ನು ಕಳೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಹಿಸ್ಸೆ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಕಾಲಪರಿಮಿತಿ ಮೀರಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

-9-

(1, 2 ಮತ್ತು 4 ನೇ ಪ್ರತಿವಾದಿಯ ಪರ ವಕೀಲರು 6ನೇ ಪ್ರತಿವಾದಿ ಮಾಡಿರುವ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.)

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.